
# ಸಾಹಿತಿಗಳ ಇಷ್ಟ ಕಷ್ಟ

ಚುನಾವಣೆ ಬರುವಾಗ ಹತ್ತಾರು ರಾಜಕೀಯ ಚರ್ಚೆಗಳನ್ನು ಹಲವು ಬಣ್ಣಗಳಲ್ಲಿ ನಮ್ಮ ಮುಂದಿಡುತ್ತದೆ! ಇವುಗಳಲ್ಲಿ ಸಾಮಾಜಿಕ – ಸಾಂಸ್ಕೃತಿಕ ಸಂಗತಿಗಳು ಸೇರಿಕೊಳ್ಳುವುದು ಸಹಜ. ಚುನಾವಣೆಯ ಬಿಸಿಯಲ್ಲಿ ಸಾಹಿತಿಗಳು ತಣ್ಣಗಿರಲು ಸಾಧ್ಯವಿಲ್ಲ. ಸರಿ, ಚುನಾವಣೆಯ ಬೆಂಕಿಯಲ್ಲಿ ಮೈಕಾಯಿಸಿಕೊಳ್ಳುವ ಸಾಹಿತಿಗಳಿಗೂ ಕೊರತೆಯಿಲ್ಲ.

ಸಾಹಿತಿಗಳನ್ನೆಲ್ಲಾ ಸಾರಾಸಗಟಾಗಿ ಚಿಂತಕರು ಎಂದು ಸಂಬೋಧಿಸುವ ಚಾಳಿ ನಮ್ಮಲ್ಲುಂಟು. ಇವರ ಚಿಂತನೆಯಲ್ಲಿ ರಾಜಕೀಯ ವಿಚಾರಗಳು ಇಲ್ಲದಿರುವುದು ಹೇಗೆ? ಸಾಹಿತಿಗಳಿಗೆ ವೈಯಕ್ತಿಕ ರಾಜಕೀಯ ನಿಲುವು ಮತ್ತು ರಾಜಕೀಯ ಪಕ್ಷದ ಒಲವು ಇರಬಾರದೆಂದರೆ ಹೇಗೆ? ಇದನ್ನು ವಿಮರ್ಶೆ, ವಿಶ್ಲೇಷಣೆಗೆ ಒಳಪಡಿಸಬಹುದೇ ಹೊರತು ನಿಷೇಧ, ನಿಂದನೆಗೆ ಗುರಿ ಮಾಡುವುದು ಸರಿಯಲ್ಲ.



'ಸಾಹಿತಿಗಳು ನಮ್ಮ ಪರವಾಗಿದ್ದರೆ ಮಾತ್ರ ಪರವಾಗಿಲ್ಲ' ಎಂದು ಎಲ್ಲ ರಾಜಕೀಯ ಪಕ್ಷಗಳೂ ಅಂದುಕೊಳ್ಳುತ್ತವೆ. 'ನಮ್ಮಿಂದ ಅಷ್ಟು ಪಡೆದವರು ನಮ್ಮನ್ನೇ ಇಷ್ಟಪಡಬೇಕು' ಎಂದು ಸ್ವಾಮಿನಿಷ್ಠೆ ವಿಧಿಸುತ್ತವೆ. 'ಪದವಿ, ಪ್ರಶಸ್ತಿಗೆ ಲಾಬಿ ಮಾಡುವಾಗ ಇಲ್ಲದ ಸಿದ್ಧಾಂತ, ಚುನಾವಣೆಯ ಕಾಲಕ್ಕೆ ಮಾತ್ರ ಬಂತಂತ?' ಎಂದೂ 'ಆಗ ಇಷ್ಟ ಪಟ್ಟು ಈಗ ಪಡದಿದ್ದರೆ ಭ್ರಷ್ಟ ಅಲ್ಲವಾ?' ಎಂದೂ ರಾಜಕಾರಣಿಗಳು ತಮ್ಮ ಪರವಾಗಿ ನಿಲ್ಲದವರನ್ನು ಕುಟುಕುತ್ತಾರೆ. ಸಾಹಿತಿಗಳಾದರೂ ಏನು ಮಾಡುತ್ತಾರೆ, ಕೆಲವರು ಏನು ಮಾಡುತ್ತಾರೋ ಅದನ್ನು ಎಲ್ಲರೂ ಅನ್ನಿಸಿಕೊಳ್ಳುವುದು ಅನಿವಾರ್ಯ. ಸರ್ಕಾರದ ಸಂಗ, ಅಭಿಮಾನ ಭಂಗ!

ಸಾಹಿತಿಗಳ ಇಷ್ಟಗಳು, ಅವುಗಳಿಂದ ಬರುವ ಕಷ್ಟಗಳು ಇಂದಿನದಲ್ಲ. 'ಓಲಗಿಸಿ ಬಾಳ್ವುದೆ ಕಷ್ಟಂ ಇಳಾಧಿನಾಥರಂ' (ಛೇ, ಈ ರಾಜರನ್ನು ಓಲೈಸಿ ಬಾಳುವುದೆ ಕಷ್ಟ) ಎಂದು ಆದಿಕವಿ ಪಂಪ ಇಷ್ಟಲ್ಲದೆ ಹೇಳಿದನೆ? ಆಮೇಲೆ, ಅರಿಕೇಸರಿಯೆಂಬ ಅರ್ಜುನನಿಂದ ಅಷ್ಟೆಲ್ಲವನ್ನೂ ಪಡೆದವನು ಕೊನೆಗೆ 'ಕರ್ಣರಸಾಯನಮಲ್ತೆ ಭಾರತಂ' (ಮಹಾಭಾರತ ಅಂದರೇನು, ಕರ್ಣ ರಸಾಯನವಷ್ಟೆ) ಎಂದು ಒಂದು ಸಾಲಿನಲ್ಲಿ ಸಾರಿದ್ದು ಸರಿಯಲ್ಲ ಎಂದು ಹೇಳಲು ಸಾಧ್ಯವೇ?

**–ಆರ್. ಪೂರ್ಣಿಮಾ**